ಓ.ಎಸ್. – 151/2024

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 29.07.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ.ಕೆ.ವಿ.ಎ ರವರಿಂದ**

**1.** ಮೃತ ಶಾಂತಪ್ಪ ಗೌಡ ನನ್ನ ದೊಡ್ಡಪ್ಪ. ನಮ್ಮ ಕುಟುಂಬಕ್ಕೆ ಗಿಳಾಲಗುಂಡಿ ಗ್ರಾಮದಲ್ಲಿ 4 ಎಕರೆ ಜಮೀನು ಇದೆ. ಅದರ ಸರ್ವೇ ನಂಬರ್ 77/1 ಮತ್ತು 79/1. ಗಿಳಾಲಗುಂಡಿ ಗ್ರಾಮದ ಸರ್ವೇ ನಂಬರ್ 77 ದೊಡ್ಡ ವಿಸ್ತೀರ್ಣದ ಜಮೀನು ಇದ್ದು, ಅದರ ಒಟ್ಟು ವಿಸ್ತೀರ್ಣ 400 ಎಕರೆಗಿಂತ ಹೆಚ್ಚು ಇದೆ ಎಂದರೆ ಸರಿ. ಸದರಿ 400 ಎಕರೆ ಕ್ಷೇತ್ರದಲ್ಲಿ ಸುಮಾರು 200 ಸರ್ವೇ ನಂಬರ್ ಗಳು ಇವೆ ಎಂದರೆ ಸರಿ. ಸದರಿ 400 ಎಕರೆ ಕ್ಷೇತ್ರದಲ್ಲಿ ಎಲ್ಲಿಯೂ ಸಹ ಅಧಿಕೃತ ರಸ್ತೆ ಇಲ್ಲ ಎಂದರೆ ಸರಿ. ಆ ಜಮೀನಿನ ಸ್ವಾಧೀನದಲ್ಲಿರುವ ಹಿಡುವಳಿದಾರರ ಸ್ವಾಧೀನದ ಸ್ವತ್ತಿನಿಂದ ಅಕ್ಕಪಕ್ಕದ ಸ್ವಾಧೀನದಾರರು ತಮ್ಮ ತಮ್ಮ ಜುಮೀನುಗಳಿಗೆ ಯಾವುದೇ ಅಡ್ಡಿ ಆತಂಕವಿಲ್ಲದೆ ಓಡಾಡುತ್ತಿದ್ದಾರೆ ಎಂದರೆ ಸರಿ.

**2.** ಪ್ರತಿವಾದಿಯರಿಗೆ ಸದರಿ ಗ್ರಾಮದಲ್ಲಿ 2 ಸರ್ವೇ ನಂಬರ್ ಗಳಲ್ಲಿ ಒಟ್ಟು 1 ಎಕರೆ 09 ಗುಂಟೆ ಜಮೀನು ಇದೆ. ಸದರಿ ಕ್ಷೇತ್ರವನ್ನು ಹೊರತು ಪಡಿಸಿ ಪ್ರತಿವಾದಿಯರಿಗೆ ಬೇರೆ ಜಮೀನು ಇಲ್ಲ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯ ಜಮೀನಿನ ನಡುವೆ ರಾಷ್ಟ್ರೀಯ ಹೆದ್ದಾರಿ –206 ಇದೆ ಎನ್ನುವುದು ಸರಿಯಲ್ಲ. ಮುಂದುವರೆದು ಪ್ರತಿವಾದಿಯರ ಜಮೀನಿನ ಪಕ್ಕದಲ್ಲಿ ಇದೆ ಎನ್ನುತ್ತಾರೆ. ಪ್ರತಿವಾದಿಯರು ತಮ್ಮ ಜಮೀನನ್ನು ಮಾರಾಟ ಮಾಡಿದ್ದರಿಂದ ನಾವು ನಮ್ಮ ಜಮೀನಿಗೆ ಓಡಾಡಲು ತೊಂದರೆ ಆಗುತ್ತದೆ ಎಂದು ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಪ್ರತಿವಾದಿಯರ ಜಮೀನಿಗೆ ಸಂಬಂಧಪಟ್ಟ ಗಿಳಾಲಗುಂಡಿ ಗ್ರಾಮದ ಸರ್ವೇ ನಂಬರ್ 76/4 ಮತ್ತು 75/3 ರ ಪಹಣಿ ಪತ್ರಿಕೆಗಳನ್ನು ನೋಡಿ ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಅವುಗಳನ್ನು ನಿಡಿ–1 ಮತ್ತು 2 ಎಂದು ಗುರುತಿಸಲಾಯಿತು.

**3.** ನನ್ನ ಪ್ರಕಾರ ನಮ್ಮ ತಂದೆಯ ಕಾಲದಿಂದಲೂ ಪ್ರತಿವಾದಿಯರ ಜಮೀನಿನಲ್ಲಿರುವ ದಾರಿಯಿಂದ ನಾವು ನಮ್ಮ ಜಮೀನಿಗೆ ಓಡಾಡುತ್ತಿದ್ದೇವೆ. ಆ ದಾರಿಯನ್ನು ಹೊರತು ಪಡಿಸಿ ನಮ್ಮ ಜಮೀನಿಗೆ ಓಡಾಡಲು ಬೇರೆ ದಾರಿ ಇಲ್ಲ. ಸಾಮಾನ್ಯವಾಗಿ ಖಾಸಗಿ ಜಮೀನಿನಲ್ಲಿ ದಾರಿ ಇದ್ದರೆ ಅದನ್ನು ನಕ್ಷೆಯಲ್ಲಿ ಕಾಣಿಸುತ್ತಾರೆ ಎಂದರೆ ಸರಿ. ಖಾಸಗಿ ಜಮೀನಿನಲ್ಲಿ ದಾರಿ ಅಥವಾ ಹಳ್ಳ ಇದ್ದರೆ ಅದನ್ನು ಖರಾಬು ಎಂದು

ಪಹಣಿ ಪತ್ರಿಕೆಯಲ್ಲಿ ಕಾಣಿಸುತ್ತದೆ ಎಂದರೆ ಸರಿ. ನಿಡಿ–1 ಮತ್ತು 2 ರಲ್ಲಿ ಯಾವುದೇ ಖರಾಬು ಕಾಣಿಸಿಲ್ಲ ಎಂದರೆ ಸರಿ. ಗಿಳಾಲಗುಂಡಿ ಗ್ರಾಮದ ಸರ್ವೇ ನಂಬರ್ 77 ಮತ್ತು 79 ರ ಜಮೀನುಗಳು ನಮಗೆ ಸೇರಿವೆ ಎಂದರೆ ಸರಿ. ಸಾಕ್ಷಿಗೆ ಗಿಳಾಲಗುಂಡಿ ಗ್ರಾಮದ ನಕಾಶೆಯನ್ನು ತೋರಿಸಿ, ಸಾಕ್ಷಿಯು ಅದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ–3 ಎಂದು ಗುರುತಿಸಲಾಯಿತು. ಸರ್ವೇ ನಂಬರ್ 77 ಮತ್ತು 79 ರ ಉತ್ತರ ದಿಕ್ಕಿಗೆ  ರಾಷ್ಟ್ರೀಯ ಹೆದ್ದಾರಿ –206 ಎಂದು ನಿಡಿ–3 ರಲ್ಲಿ ಕಾಣಿಸಿದ್ದಾರೆ ಎಂದರೆ ಸರಿಯಲ್ಲ. ಮುಂದುವರೆದು ವಾಸ್ತವವಾಗಿ ಸ್ಥಳದಲ್ಲಿ ಯಾವುದೇ ರಸ್ತೆ ಇಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ  ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.